

ಸರಿಯಾಗಿ ಬದುಕಿನಲ್ಲಿ ಮುನ್ನುಗ್ಗುತ್ತಾ ಸಾಗುವವನಾಗಿ ಕಾಣುವ ವಿಶೇಷವಾದ ಪಾತ್ರ. ಶಿವರಾಮ ಕಾರಂತರ ಪಾತ್ರ ಪ್ರಪಂಚದ ಒಂದು ಅಪರೂಪದ ಚಿತ್ರಣ.

ಜಯರಾಮ ವಿದ್ಯಾವಂತ. ತನ್ನ ಬೇರು-ಕುಟುಂಬದ ಹಿನ್ನೆಲೆ ಎಲ್ಲವನ್ನೂ ಚೆನ್ನಾಗಿ ಅರಿಯಬಲ್ಲವನು ಮಾತ್ರವಲ್ಲ ಸಂಬಂಧಗಳಿಗೆ ವಿಶೇಷ ಮಹತ್ವವನ್ನು ಕೊಡುವಂಥವನು. ವೈಚಾರಿಕ ಪ್ರಖರತೆ ಇವನಲ್ಲಿ ಇರುವ ಕಾರಣ ಯಾವುದೇ ವಿಚಾರವು ತನಗೆ 'ಸರಿ' ಎನಿಸದಿದ್ದಾಗ ಅದನ್ನು ಒಪ್ಪಲು ಅವನಿಂದ ಸಾಧ್ಯವಾಗುವುದಿಲ್ಲ, ಹಾಗಿದ್ದರೂ ಯಾರಿಗೂ ನೋವುಂಟು ಮಾಡುವಷ್ಟು ತೀಕ್ಷ್ಣವಾದ ತೀರ್ಮಾನ ತೆಗೆದುಕೊಳ್ಳಲಾರ. ಹಾಗೆಂದು ತನ್ನ ಅಭಿಪ್ರಾಯವನ್ನು ಮಂಡಿಸದೆ, ಯಾವ ವಿಚಾರದಲ್ಲೂ ಹೊಂದಾಣಿಕೆ ಮಾಡಿಕೊಳ್ಳಲಾರ. ಅವನಲ್ಲಿ ಯುಕ್ತಾಯುಕ್ತತೆಯ ವಿವೇಚನೆಯಿದೆ. ಆತ್ಯಂತ ಸಂವೇದನಾಶೀಲನಾದ ಜಯರಾಮ ಮಾತೃಹೃದಯಿ. ಅಲ್ಲೆಲ್ಲೋ ಮಗುವೊಂದು ಅನಾಥವಾಗಿದೆ ಎಂದಾಗ ಆತ ಇನ್ನೊಂದು ಯೋಚನೆ ಮಾಡದೆ ಆ ಮಗುವನ್ನು ಸಾಕುವ ತೀರ್ಮಾನ ಮಾಡುತ್ತಾನೆ. ತನ್ನ ಅತ್ತಿಗೆ ಪುಟ್ಟ ಮಗುವನ್ನು ಬಿಟ್ಟು ಹೊರಟಾಗಲೂ ತಾನೇ ತಂದಿಟ್ಟುಕೊಳ್ಳುತ್ತಾನೆ. ಅಣ್ಣನ ಬಗ್ಗೆ ವಿಶೇಷವಾದ ಗೌರವ-ಅಭಿಮಾನ ಇರಿಸಿಕೊಂಡ ಜಯರಾಮ, ಸಂಬಂಧಗಳನ್ನು ಚೆನ್ನಾಗಿಟ್ಟುಕೊಳ್ಳಲು ಶ್ರಮಿಸುವಂಥವನು. ಅಣ್ಣ ಹಾಗೂ ತಾಯಿಯ ನಡುವಿನ ಬೇಸರವನ್ನು ಹೋಗಿಸಲು ಒದ್ದಾಡುತ್ತಾನೆ. ಅತ್ತಿಗೆಯ ಸ್ವಭಾವ ಸರಿಯೆನಿಸದಿದ್ದರೂ ಅಣ್ಣನಿಗಾಗಿ ಸುಮ್ಮನಿರುತ್ತಾನೆ. ತನ್ನ ಪರೀಕ್ಷೆಯ ಫಲಿತಾಂಶಕ್ಕೆ ತೊಂದರೆ ಇದೆ ಎಂದು ಅರಿತಿದ್ದರೂ ತಾತ್ವಿಕ ಸ್ಪಷ್ಟೀಕರಣಕ್ಕಾಗಿ ಪ್ರೊಫೆಸರ್ ಜೊತೆ ಚರ್ಚೆಗಿಳಿಯುತ್ತಾನೆ. ಎಲ್ಲೋ ಮೃದಂಗ ವಾದನ ಕೇಳಿ, ಆ ಕಲೆಗೆ ಮಾರು ಹೋಗಿ ತಾನೂ ಕಲಿಯತೊಡಗುತ್ತಾನೆ. ಉಮೆಯ ಜೊತೆಗಿನ ಸಖ್ಯದಲ್ಲಿ ಅವನಿಗೆ ಆನಂದವೆಂದು ಗೊತ್ತಿದ್ದರೂ, ಅವಳ ಭವಿಷ್ಯದ ಬಗ್ಗೆ ಚಿಂತಿಸುತ್ತಾನೆ. ತನ್ನ ಬುದ್ಧಿವಂತಿಕೆ, ವಿದ್ಯೆ ಮತ್ತು ಸಾಮಾಜಿಕ ಅಂತಸ್ತನ್ನು ಬಳಸಿಕೊಂಡು ಇನ್ನೂ ಎತ್ತರದ ಸ್ಥಾನವನ್ನು ಆತ ಪಡೆಯಬಹುದಾಗಿದ್ದರೂ, ಜಯರಾಮನಿಗೆ ಅಂತಹ ಆಸೆಗಳೇನೂ ಇಲ್ಲ. ಹಾಗೆ ನೋಡಿದರೆ ಜಯರಾಮನಿಗೆ ತನ್ನ ಗುರಿಯ ಬಗ್ಗೆ ಸ್ಪಷ್ಟತೆಯೇನೂ ಇಲ್ಲ. ಆದರೆ ಸಾಗುವ ದಾರಿ ಎಂಥದ್ದಿರಬೇಕು ಎನ್ನುವಲ್ಲಿ ಆತ ಸ್ಪಷ್ಟವಾಗಿದ್ದಾನೆ ಎನಿಸುತ್ತದೆ. ಆತ ಮಹತ್ವಾಕಾಂಕ್ಷಿಯಲ್ಲ; ಹಳ್ಳಿ, ಕಾಡು ಮೇಡು ತಿರುಗುತ್ತಾ, ಪುಸ್ತಕಗಳನ್ನು ಓದುತ್ತಾ, ತನಗೆ ಪ್ರೀತಿಪಾತ್ರರು ಎನಿಸಿದವರೊಡನೆ ಚರ್ಚಿಸುತ್ತಾ ಹೊತ್ತು ಕಳೆಯುವ ಜೀವನಪ್ರೇಮಿ. ಜಯರಾಮನಲ್ಲಿನ ಬುದ್ಧಿವಂತಿಕೆ, ಒಳ್ಳೆಯತನ ಆತನ ತರ್ಕ ಎಲ್ಲವನ್ನೂ ಮೆಚ್ಚುತ್ತಾ ಬರುತ್ತಿದ್ದಂತೆ, ಏನೊಂದೂ ಉದ್ದೇಶವಿಲ್ಲದೆ ಅವನ ಜೀವನ ಸಾಗುವುದು ಸ್ವಲ್ಪ ಅಸಹನೆಯನ್ನು ಉಂಟು ಮಾಡಿತು ಎಂದರೆ ತಪ್ಪಲ್ಲ.